15 ಮೈಲು ದೂರವಿರುವ ಕೊಳಸಾಲು ಎಂಬ ಹಳ್ಳಿ, ಅದೇ ಪರಿಸರದಲ್ಲಿರುವ ಹಸುರೂರು ಎಂಬ ಹಳ್ಳಿ, ಮಂಗಳೂರು ಮತ್ತು ಮದ್ರಾಸು. ಕಾದಂಬರಿಯಲ್ಲಿ ದಾರಿ ತಪ್ಪಿರುವ ದಾಮೋದರ ಮತ್ತು ಪ್ರೇಮಾವತಿ ಎಂಬ ಅಣ್ಣ ತಂಗಿಯರ ಪತನ, ಅವರು ಅನುಭವಿಸುವ ಸೋಲು, ಅವರ ಪಶ್ಚಾತ್ತಾಪ, ಮತ್ತು ನೇರ ದಾರಿಯಲ್ಲಿ ನಡೆಯುವ ಅವರ ಸಂಕಲ್ಪ ಇವುಗಳ ವರ್ಣನೆಯಿದೆ. ಅವರಿಬ್ಬರೂ ಕೊಳಸಾಲಿನ ರಾಮಪ್ಪಯ್ಯನವರ ಮಕ್ಕಳು. ಇಬ್ಬರನ್ನೂ ದಾರಿ ತಪ್ಪುವಂತೆ ಮಾಡಿದ್ದು ಮಂಗಳೂರು ಪೇಟೆ. ಅವರ ಅಧಃಪತನವನ್ನು ಸಂಪೂರ್ಣಗೊಳಿಸಿದ್ದು ಮದ್ರಾಸು ಮಹಾನಗರ. ಕರ್ನಾಟಕದ ಏಕೀಕರಣ ಆಗುವವರೆಗೆ ದಕ್ಷಿಣಕನ್ನಡವು ಮದ್ರಾಸು ಪ್ರಾಂತ್ಯಕ್ಕೆ ಸೇರಿದ್ದ ಕಾರಣ ಇಲ್ಲಿನವರು ವಿದ್ಯಾಭ್ಯಾಸ, ಉದ್ಯೋಗ, ವ್ಯಾಪಾರ ಇತ್ಯಾದಿಗಳಿಗೆ ಆ ನಗರಕ್ಕೆ ಹೋಗಿಬರುತ್ತಿದ್ದುದು ಸಾಮಾನ್ಯವಾಗಿತ್ತು. ಆ ವಲಸೆಯ ಕಥೆಯನ್ನು ಮತ್ತು ಮಂಗಳೂರನ್ನೂ ಮದ್ರಾಸನ್ನೂ ಕಥಾನಕದ ಕೇಂದ್ರಗಳಾಗಿ ಉಳ್ಳ ಕಾದಂಬರಿಗಳು ಕನ್ನಡದಲ್ಲಿ ಅಥವಾ ತುಳುವಿನಲ್ಲಿ (ಸತೀ ಕಮಲೆ) ಬೆರಳೆಣಿಕೆಯಲ್ಲಿವೆ. 'ಪ್ರೇಮಾವತಿ' ಆ ಕಾರಣಕ್ಕೂ ಗಮನಸೆಳೆಯುತ್ತದೆ.

ಕೊಳಸಾಲಿನ ರಾಮಪ್ಪಯ್ಯ ಬಹಳ ಜಿಪುಣರು. ಯುದ್ಧದ ಕಾಲದಲ್ಲಿ ಅಕ್ಕಿಯ ಕಾಳ ಸಂತೆ ವ್ಯವಹಾರ ಮಾಡಿ ಶ್ರೀಮಂತರಾಗಿದ್ದರು. ಊರಿನಲ್ಲಿ ಕೃಷಿ ಕಾರ್ಯ ಮಾಡುತ್ತಾ, ಹಣ ಕೂಡಿಡುತ್ತಾ, ಬಡ್ಡಿ ವ್ಯಾಪಾರ ಮಾಡುತ್ತಿದ್ದರು. ಅವರ ಮಕ್ಕಳಲ್ಲಿ ದೊಡ್ಡವ ದಾಮೋದರ ಕಲಿಯುವುದರಲ್ಲಿ ಹಿಂದಿದ್ದರೂ ಅವನನ್ನು ಮಂಗಳೂರಿನಲ್ಲಿರಿಸಿ ಬಿ.ಎ. ಶಿಕ್ಷಣ ಕೊಡಿಸುತ್ತಾರೆ. ಅವನು 25 ನೆಯ ವಯಸ್ಸಿನಲ್ಲಿ ಬಿ.ಎ. ಫೈಲಾಗಿ, ಊರಿಗೆ ಬರಲೊಪ್ಪದೆ ಮಂಗಳೂರಿನಲ್ಲಿ ಜವಳಿ ಅಂಗಡಿಯಲ್ಲಿ ಗುಮಾಸ್ತನಾಗಿದ್ದ. ಎರಡನೆಯ ಮಗ ಕೇಶವ ಬುದ್ಧಿವಂತ. ಎಂ.ಎ., ಬಿ.ಟಿ. ಮಾಡಿ ಊರಿನಲ್ಲಿಯೇ ಅಧ್ಯಾಪಕನಾಗಿದ್ದ, ಕೃಷಿಯಲ್ಲಿಯೂ ತಂದೆಗೆ ಸಹಕಾರ ನೀಡುತ್ತಿದ್ದ. ಪ್ರೇಮಾವತಿ ಬುದ್ಧಿವಂತ ಹುಡುಗಿ, ಮಂಗಳೂರಿನಲ್ಲಿ ಬಿ.ಎ. ಓದುತ್ತಿದ್ದಳು. ಕೊನೆಯ ಹುಡುಗ ಕೃಷ್ಣನಿಗೆ ಶಾಲೆಯ ಓದಿಗಿಂತ ಕೃಷಿ ಕೆಲಸ ಇಷ್ಟ. ಇದು ಕಾದಂಬರಿಯ ಪ್ರಾರಂಭದ ಸ್ಥಿತಿ.

ಕಾದಂಬರಿಯ ದೃಷ್ಟಿ ಕೇಂದ್ರೀಕರಿಸಿರುವುದು ದಾಮೋದರನ ಲಚ್ಚತ್ವದ ಮೇಲೆ (ಲಚ್ಚತ್ವ ಅಂದರೆ ಶಿವರಾಮ ಕಾರಂತರ 'ಮರಳಿ ಮಣ್ಣಿಗೆ'ಯ ಲಚ್ಚನ ತರಹದ ವರ್ತನೆ ಮತ್ತು ಬದುಕು ಎಂಬ



ಅರ್ಥದಲ್ಲಿ ಪ್ರಯೋಗಿಸಿದ್ದೇನೆ. ಲಚ್ಚ ಕನ್ನಡ ಸಾಹಿತ್ಯದ ಒಂದು ಆರ್ಕಿಟೈಪ್ ಆಗಬಲ್ಲವ) ಮತ್ತು ವಿದ್ಯಾವಂತ ಯುವತಿ ಪ್ರೇಮಾವತಿಯ ಪತನದ ಮೇಲೆ. ಮಂಗಳೂರಿನಲ್ಲಿ ನೆಲೆಸಿದ್ದ ಮದ್ರಾಸಿನ ಚಿತ್ರ ಕಲಾವಿದ ಸುಂದರೇಶ್ ಎಂಬವ ಇಬ್ಬರ ಬಾಳಿನಲ್ಲೂ ಖಳನಾಯಕನಾಗಿ ಪ್ರವೇಶಿಸಿದವನು. ದಾಮೋದರನ ಉಪಪತ್ನಿ ಸಣ್ಣಂಗಿಯನ್ನು ಅವನ ಸಂಪತ್ತಿನ ಜತೆಯಲ್ಲಿ ಹಾರಿಸಿಕೊಂಡು ಹೋದವನು ಮತ್ತು ಪ್ರೇಮಾವತಿಯನ್ನು ಪ್ರೀತಿಸುವ ನಾಟಕವಾಡಿ ಅವಳ ದೇಹ ಸುಖವನ್ನುಂಡು ಅವಳನ್ನು ಮದ್ರಾಸಿಗೆ ಕರೆದುಕೊಂಡು ಹೋಗಿ ಮದುವೆಯಾಗುತ್ತೇನೆಂದು ನಂಬಿಸಿ ಕೈಕೊಟ್ಟವನು.

ದಾಮೋದರ ಮಂಗಳೂರಿನಲ್ಲಿ ಮಾವನ